ಅದೇ ಸರ್ಟಿಫಿಕೇಟ್ ತೆಗೆದುಕೊಳ್ಳುವುದಾದರೆ ಬಹುಶಃ ಈ ಉತ್ತರದಿಂದ ನಮಗ್ಯಾರಿಗೂ ತೃಪ್ತಿ ಆಗಿಲ್ಲ. ಚರ್ಚೆ, ಕ್ಲಾರಿಫಿಕೇಶನ್ ಕೇಳುವುದರಿಂದ, ಅದಕ್ಕೆ ಉತ್ತರ ಕೊಡುವಂತಹ ಮನಸ್ಥಿತಿಯಲ್ಲೂ ಸಹ ನೀವು ಇಲ್ಲ. ಈ ನೀತಿ ಈ ಕಾನೂನು ಸುವ್ಯವಸ್ಥೆ ಹದಗೆಟ್ಟುತ್ತಿದ್ದರೂ ನೀವು ಕೈಕಟ್ಟಿ ಕುಳಿತಿರುವುದನ್ನು ನಾವು ಪ್ರತಿಭಟನೆ ಮಾಡು ನಾವು ವಾಕೌಟ್ ಮಾಡಿ ಹೋಗುತ್ತೇವೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ತಾವುಗಳು walkout ಮಾಡಲಿಕ್ಕೇ ಬಂದಿರುವುದು ಎಂಬುದು ನನಗೆ ಗೊತ್ತಿತ್ತು. ರಾಜ್ಯದ ನಕ್ಸಲೀಯ ಚಟುವಟಿಕೆಗಳ ಬಗ್ಗೆ, ಲಾ ಅಂಡ್ ಆರ್ಡರ್ ಬಗ್ಗೆ ಇದಕ್ಕಿಂತ ಹೆಚ್ಚು ಏನೂ ಉತ್ತರ ಬೇಕಿಲ್ಲ. ನಾನು ಏನು ನಿಮಗೆ ಹೇಳಿದೆ? ರಾಜ್ಯದಲ್ಲಿ ಸುವ್ಯವಸ್ಥೆ ಚೆನ್ನಾಗಿದೆ. ಪಂಚಾಯಿತಿ ಚುನಾವಣೆ ನಡೆದಿದೆ. ಎಲ್ಲಾ ಕಡೆಗೂ ವ್ಯವಸ್ಥೆ ಮಾಡುತ್ತಿದ್ದೇವೆ. ಡಾ. ಸುದರ್ಶನ್ ಅವರು ಬಂದಿದ್ದಾಗ ಕೂಡ ವ್ಯವಸ್ಥಿತವಾದ ರೀತಿಯಲ್ಲಿ ಮಾಡಿದ್ದೇವೆ. ಡಾ. ಸುದರ್ಶನ್ ಅವರೇ ಒಳ್ಳೆಯ ಸರ್ಟಿಫಿಕೇಟ್ ಕೊಟ್ಟಿದ್ದಾರೆಂದು ನಾವು ಹೇಳಿದ್ದೇವೆ.

(ಗೊಂದಲ)

ಶ್ರೀ ಜಿ.ಶಿವಣ್ಣ : ಅಲ್ಲ ಸಾಹೇಬರೇ, ಒಂದೇ ಒಂದು ನಿಮಿಷ. ಏಳು ಜನ ಪೋಲೀಸ್ ನವರು ಸತ್ತು ಹೋದರೆ ಅದರ ಬಗ್ಗೆ ಸ್ವಲ್ಪವೂ ಕನಿಕರ ಇಲ್ಲದೆ, ನನ್ನ ಆಡಳಿತ ಚೆನ್ನಾಗಿದೆ ಎಂದು ಹೇಳಿಕೊಳ್ಳುತ್ತೀರಲ್ಲಾ, ಇದು ಯಾವ ನ್ಯಾಯ ಸ್ವಾಮಿ? ಇದು ಯಾವ ನ್ಯಾಯ ಹೇಳಿ?

ಶ್ರೀ ಧರ್ಮಸಿಂಗ್ : ಈಗ ಕೇಳಿ. ಏನಾಗಿದೆ ಎಂದರೆ . . .

ಶ್ರೀ ಜಗದೀಶ್ ಶೆಟ್ಟರ್ : ಮಂತ್ರಿಗಳೂ ಹೋಗಲಿಲ್ಲ, ಯಾರೂ ಹೋಗಲಿಲ್ಲ. ಆ ಕುಟುಂಬಕ್ಕೆ ಸಮಾಧಾನ ಮಾಡುವಂತಹ ವ್ಯವಧಾನವೂ ಇಲ್ಲ ತಮಗೆ. ಮಾನ್ಯ ಮುಖ್ಯ ಮಂತ್ರಿಗಳು ಹೋಗಬೇಕಾಗಿತ್ತು. ಏಳು ಜನ ಪೋಲೀಸರು ಸತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿಗೆ ಹೋಗಬೇಕಾಗಿತ್ತು. ಆ ಕುಟುಂಬದವರನ್ನು ಭೇಟಿ ಆಗಿ ಬರಬಹುದಾಗಿತ್ತು. ಅಲ್ಲಿಗೆ ಒಬ್ಬ ಮಂತ್ರಿ ಸಹಿತ ಹೋಗಿಲ್ಲ.

ಶ್ರೀ ಜಿ.ಶಿವಣ್ಣ : ಪಾವಗಡಕ್ಕೆ ಹೋದರೆ ಗೊತ್ತಾಗುತ್ತದೆ. ಏಕೆಂದರೆ .....

(ಗೊಂದಲ)

ಶ್ರೀ ಧರ್ಮಸಿಂಗ್ : ಜಿಲ್ಲಾ ಉಸ್ತುವಾರಿ ಸಚಿವರು ಹೋಗಿ ಬಂದಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ : ತಾವು ಮೂರು ಉದಾಹರಣೆ ಕೊಟ್ಟಿರಿ. ಮಾನ್ಯ ಲಾಲ್‌ಕೃಷ್ಣ ಅಡ್ವಾನಿಯವರ ಬಗ್ಗೆ ಹೇಳಿದಿರಿ. ಇಂದಿರಾ ಗಾಂಧಿ ಹತ್ಯೆ ಸಂದರ್ಭ ಹೇಳಿದಿರಿ. ರಾಜೀವ್ ಗಾಂಧಿ ಹತ್ಯೆ ಸಂದರ್ಭ ಹೇಳಿದಿರಿ.

ಶ್ರೀ ಧರ್ಮಸಿಂಗ್ : ಅದಾದ ಮೇಲೆ ಹೇಳುತ್ತೇನೆ. ಹೇಳಿ. ನಿಮಗೆ ಬೇರೆ ಉತ್ತರ ಹೇಳಬೇಕಾಗುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ : ಅವರೆಲ್ಲರದ್ದೂ ಕೂಡ ನಿರ್ನಾಮ ಆಗಿ ಹೋಯಿತು. ಯಾರ್ಯಾರು ಅನ್ಯಾಯ ಮಾಡಿದರೋ ಅವರೆಲ್ಲಾ ನಿರ್ನಾಮ ಆಗಿ ಹೋದರು. ನಾನು ಅವರನ್ನು ನಿರ್ನಾಮ ಮಾಡುತ್ತೇನೆಂದು ಒಂದು ಮಾತು ನಿಮ್ಮ ಬಾಯಿಂದ ಬರಲಿಲ್ಲ. ತಾವು ದಯವಿಟ್ಟು ಕೇಳಿ.

(ಗೊಂದಲ)

ಶ್ರೀ ಧರ್ಮಸಿಂಗ್ : ಮಾನ್ಯ ಈಶ್ವರಪ್ಪನವರೆ ಕೇಳಿ . .

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಸಾರ್, ದಯವಿಟ್ಟು ಕೇಳಿ.

ಶ್ರೀ ಧರ್ಮಸಿಂಗ್ : ನಾನು ಈ ರಾಜ್ಯದ ಮುಖ್ಯಮಂತ್ರಿ. ಜವಾಬ್ದಾರಿಯಿಂದ ಹೇಳಬೇಕಾಗುತ್ತದೆ. ನಾವು ನಿಯಂತ್ರಣ ಮಾಡಿದ್ದೇವೆ. ಸಾಕೇತ್ ರಾಜ್‌ರವರನ್ನು ನೀವು ಮಾಡಿದಿರಾ? ಯಾವ ನಿಮ್ಮ ರಾಜ್ಯದಲ್ಲಿ ಮಾಡಿದ್ದೀರಿ? ಈಗ ನವೀನ್ ಪಾಟ್ನಾಯಕ್‌ಗೆ ಬೆಂಬಲ ಕೊಡುತ್ತಿದ್ದೀರಿ. ಶ್ರೀ ವೆಂಕಯ್ಯ ನಾಯ್ಡು ಅವರು ಅಲ್ಲಿ ಬಿದ್ದು ಬಿಟ್ಟರು. ಎಲ್ಲಿ ಸಂರಕ್ಷಣೆ ಇದೆ?

ಶ್ರೀ ಕೆ.ಎಸ್.ಈಶ್ವರಪ್ಪ : ಹದ್ದು ಮೀರಿ ಮಾತನಾಡಬಾರದು.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ದತ್ತ ಪೀಠದ ಬಗ್ಗೆ ಹೇಳಿದ್ದೀರಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಹಿಂದೂಗಳ ಮೆರವಣಿಗೆಯನ್ನು ತಾವು ನಿಲ್ಲಿಸಿ ದೊಡ್ಡ ಕೆಲಸ ಮಾಡಿದ್ದೀರಿ. ನೀವು ಮುಸಲ್ಮಾನರ ಮೆರವಣಿಗೆ ನಿಲ್ಲಿಸುವ ಕೆಲಸ ಮಾಡಿ.

ಶ್ರೀ ಧರ್ಮಸಿಂಗ್ : ನೀವು ಆರ್‌ಎಸ್‌ಎಸ್ ಕ್ಯಾಂಪ್ ಮಾಡಿದ್ದೇ ಬೇರೆ ಉದ್ದೇಶಕ್ಕೋಸ್ಕರ. ನೀವು ಆರ್‌ಎಸ್‌ಎಸ್ ಕ್ಯಾಂಪ್ ಮಾಡಿದ್ದೇ ಬೇರೆ ಉದ್ದೇಶಕ್ಕೋಸ್ಕರ ಮಾಡಿದ್ದು.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ನಕ್ಸಲೀಯರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಒಂದು ಮಾತನ್ನು ಹೇಳಲಿಲ್ಲ. ಇದೊಂದು ಸರ್ಕಾರವೇ? ನಿಮ್ಮನ್ನು ಮುಖ್ಯ ಮಂತ್ರಿ ಎಂದು ಹೇಳಬೇಕೇ?

(ಗೊಂದಲ)

ಶ್ರೀ ಪಿ.ಟಿ.ಪರಮೇಶ್ವರ ನಾಯಕ್ : ಅವರಿಗೆ ಬೇಕೆ ಕೆಲಸ ಇಲ್ಲ. ವಾಕ್‌ಔಟ್ ಮಾಡುವುದೇ ಅವರ ಕೆಲಸ. ವಾಕ್‌ಔಟ್ ಮಾಡಲಿ ಬಿಡಿ

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ...ಕಳಕಳಿ ಇಲ್ಲ. ಈ ವಿಷಯವನ್ನು ರಾಜಕೀಯ ಗೊಳಿಸಲು ನಾನು ಸಿದ್ಧನಿಲ್ಲ. ನಿಮ್ಮ ಒಂಭತ್ತು ತಿಂಗಳ ಅಧಿಕಾರಾವಧಿಯಲ್ಲಿ ನಾಡಿನ ಜನರು ಧೈರ್ಯ ಮತ್ತು ಗೌರವದಿಂದ ರಸ್ತೆಗಳಲ್ಲಿ ಓಡಾಡಲು ಸಾಧ್ಯವಾಗದಂಥ ವಿಚಿತ್ರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ನಿಮ್ಮ ಪೊಲೀಸ್ ಇಲಾಖೆಯ ಬಹಳ ಪ್ರಮುಖರು ಈ ಚಟುವಟಿಕೆಯಲ್ಲಿ ಕೈ ಜೋಡಿಸಿದ್ದಾರೆ. ಸರ್ಕಾರದ ಇಂತಹ ನೀತಿಯನ್ನು ಖಂಡಿಸಿ ... ತಾವು ಇವ್ಹೊತ್ತು ಅಂತಹ ಜಿಲ್ಲಾಧಿಕಾರಿಗಳಿಗೆ ಸರ್ಟಿಫಿಕೇಟ್ ಕೊಡುತ್ತಿದ್ದೀರಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ನಕ್ಸಲೀಯರಿಗೆ, ಕೊಲೆಗಾರರಿಗೆ ಆಶ್ರಯ ನೀಡುತ್ತಿರುವ ಸರ್ಕಾರ ಇದಾಗಿದೆ.

ಶ್ರೀ ಧರ್ಮಸಿಂಗ್ : ಚುನಾವಣೆಯಲ್ಲಿ ತೋರಿಸಿ. ಇಲ್ಲಿ ಬೇಡ ಚಿಕ್ಕಮಗಳೂರಿನಲ್ಲಿ ಹೋಗಿ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ವಿರೋಧ ಪಕ್ಷದ ನಾಯಕರಾದ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದಲ್ಲಿ ಸಭಾತ್ಯಾಗ ನಡೆಸಿದರು)